ಅರಣ್ಯ ಪ್ರದೇಶದಲ್ಲಿ ಬಗರ್‌ಹುಕುಂ ಸಾಗುವಳಿ ಬಗ್ಗೆ ಎಂ.ಪಿ.ಎಂ. ಕಾರ್ಮಿಕರು ನೀಡಿರುವ ಎಚ್ಚರಿಕೆ.

1514(2306)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮಾಣ): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಂ.ಪಿ.ಎಂ.ನ ಅರಣ್ಯ ವಿಭಾಗದಲ್ಲಿ ಎಷ್ಟು ಜನ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ, ಹುದ್ದೇವಾರು ವಿವರ ನೀಡುವುದು.

ಆ) ಎಂ.ಪಿ.ಎಂ.ನ ಅರಣ್ಯ ವ್ಯಾಪ್ತಿ ಎಷ್ಟು?

ಇ) ಇಲ್ಲಿ ಸಾಂದರ್ಭಿಕ ಆಧಾರದ ಮೇಲೆ 18-20 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದರೂ ಇವರುಗಳನ್ನು ಇನ್ನೂ ಖಾಯಂ ಮಾಡದೆ ಇರುವುದು ನಿಜವೇ;

ಈ) ಪ್ರಸಕ್ತ ಆರ್ಥಿಕ ವರ್ಷದಲ್ಲಿ ಎಂ.ಪಿ.ಎಂ. ಗಳಿಸಿರುವ ಲಾಭದ ಮೊತ್ತ ಎಷ್ಟು?

ಉ) ಇವರ ಬೇಡಿಕೆಗಳು ಈಡೇರದೆ ಇದ್ದಲ್ಲಿ ತಾವು ಕಾಯುತ್ತಿರುವ ಜಮೀನಿನಲ್ಲೇ ಬಗರ್‌ಹುಕುಂ ಸಾಗುವಳಿ ಮಾಡುವುದಾಗಿ ಎಚ್ಚರಿಕೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ) 521. ಇವರುಗಳು ಕನಿಷ್ಠ ವೇತನದ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಹುದ್ದೇವಾರು ವಿವರವನ್ನು ನೀಡಲು ಬರುವುದಿಲ್ಲ.

ಆ) 33,496. ಹೆಕ್ಟೇರುಗಳು.

ಇ) ಹೌದು, ನಿಜ.

ಈ) ಪ್ರಸಕ್ತ ಸಾಲಿನಲ್ಲಿ (2000-2001) ಒಟ್ಟು 940 ಲಕ್ಷ ರೂ.ಗಳ ಲಾಭ ಗಳಿಸಿದೆ.

ಉ) ಎಂ.ಪಿ.ಎಂ.ನಿಗಮದ ಗಮನಕ್ಕೆ ಬಂದಿದೆ. ಆದರೆ, ಇಂತಹ ಕಾನೂನು ಬಾಹಿರ ಚಟುವಟಿಕೆಗಳನ್ನು ಸರ್ಕಾರದಲ್ಲಿ ಗಂಭೀರವಾಗಿ ಅವಲೋಕಿಸಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.